(ಆ) ಈ ಸಮಸ್ಯೆಯನ್ನು ಪರಿಶೀಲಿಸಿ ಅಭಿವೃದ್ಧಿ ಕಾರ್ಯಗಳ ಯೋಜನೆಯೊಂದನ್ನು ತಯಾರಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸೂಚಿಸಲಾಗುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಹೋದ ವಿಧಾನ ಸಭೆಯಲ್ಲಿ ಶಿವಮೊಗ್ಗ ನಗರಕ್ಕೆ ನೀರಿನ ಸಮಸ್ಯೆಯೇ ಇಲ್ಲ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದರು. ಈಗ ಇದನ್ನು ಗಮನಕ್ಕೆ ತೆಗೆದುಕೊಂಡು ಉತ್ತರ ಕೊಟ್ಟಿರುವುದಕ್ಕೆ ಅವರಿಗೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ಆದರೆ ಇದರ ಬಗ್ಗೆ ಸಾಧಾರಣವಾಗಿ ಎಷ್ಟು ವರ್ಷದ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಒಂದು ಯೋಜನೆಯನ್ನು ತಯಾರು ಮಾಡುವುದಕ್ಕೆ ಸೂಚನೆ ಕೊಡುತ್ತೀರಿ ಮತ್ತು ಈ ಸೂಚನೆಯನ್ನು ಯಾವಾಗ ಕೊಡುತ್ತೀರಿ ? ಅದಷ್ಟು ಶೀಘ್ರವಾಗಿ, ಈ ಅಧಿವೇಶನ ಮುಗಿಯುವುದರೊಳಗಾಗಿ ಸೂಚನೆಯನ್ನು ಅವರಿಗೆ ಕೊಡಬೇಕು. ಏಕೆಂದರೆ ಈ ಯೋಜನೆಯನ್ನು ತಯಾರು ಮಾಡುವುದಕ್ಕೇ ಎರಡು ವರ್ಷಗಳ ಕಾಲ ತೆಗೆದುಕೊಂಡರೆ ಕಷ್ಟವಾಗುತ್ತದೆ. ಆದುದರಿಂದ ತಕ್ಷಣ ನಗರ ನೀರು ಸರಬರಾಜು ಮಂಡಳಿಯವರಿಗೆ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಹಿಂದೆ ೧೯೮೧ನೇ ಜನಗಣತಿ ಪ್ರಕಾರ ಶಿವಮೊಗ್ಗ ಜನಸಂಖ್ಯೆ ಒಂದೂವರೆ ಲಕ್ಷ ಇದ್ದುದು ಈಗಿನ ಜನಸಂಖ್ಯೆ ಒಂದು ಲಕ್ಷದ ೭೦ ಸಾವಿರಕ್ಕೂ ಹೆಚ್ಚಾಗಿದೆ. ಹಿಂದಿನ ಜನಸಂಖ್ಯೆಗನುಗುಣವಾಗಿ ೪.೫ ಮಿಲಿಯನ್ ಗ್ಯಾಲನ್ ನೀರು ಕೊಡುತ್ತಿದ್ದುದು ಸರಿಹೋಗುತ್ತಿತ್ತು. ಈಗ ಜನಸಂಖ್ಯೆ ಹೆಚ್ಚಾಗಿರುವುದರಿಂದ, ನೀರಿನ ಸರಬರಾಜು ಸಾಲುವುದಿಲ್ಲ ವೆಂಬುದನ್ನು ಪರಿಗಣನೆಗೆ ತೆಗೆದುಕೊಂಡಿದ್ದೇನೆ. ಈ ಕೂಡಲೇ ನಗರ ನೀರು ಸರಬರಾಜು ಮಂಡಲಿಯವರು ಅಂದಾಜು ಪಟ್ಟಿ ಸಿದ್ಧಮಾಡಿ, ಸರ್ಕಾರಕ್ಕೆ ಕಳುಹಿಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ಅಂದಾಜುಪಟ್ಟಿ ತಯಾರ ಮಾಡುತ್ತೀರಿ. ಆದರೆ ಎರಡು ಸಾವಿರದ ಇಸವಿಯವರೆಗೆ ಎಷ್ಟು ಜನಸಂಖ್ಯೆ ಎಂದು ಅಂದಾಜು ಮಾಡಿದ್ದೀರಿ.ಆದುದರಿಂದಲೇ ಇಸವಿಗೆ ಮೀರಿ ಹೋಗಿದೆ.ಸಾಧಾರಣವಾಗಿ ಎಷ್ಟು ವರ್ಷದ ಜನಸಂಖ್ಯೆ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡ ಅಂದಾಜು ಮಾಡಬೇಕೆಂಬುದರ ಬಗ್ಗೆ ಸ್ವಲ್ಪ ವೈಜ್ಞಾನಿಕವಾದ ಸೂಚನೆ ಇಲ್ಲಿದೇಹೋದರೆ, ನೀವು ಪಟ್ಟಿ ತಯಾರು ಮಾಡುವ ಹೊತ್ತಿಗೆ ನಿಮ್ಮ ಪ್ಲಾನ್ ಔಟ್ ಡೇಟೆಡ್ ಆಗುತ್ತದೆ. ಆದುದರಿಂದ ಇದರ ಬಗ್ಗೆ ಸರಿಯಾದ ಸೂಚನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಜನಸಂಖ್ಯೆ ಬೆಳವಣಿಗೆಯ ವಿವರಗಳನ್ನು ನಾವು ಬೇರೆ ಇಲಾಖೆ ಮತಿಯಿಂದ ಪಡೆಯಬೇಕು. ಆದರೂ ಶಿವಮೊಗ್ಗ ನಗರದ ಜನಸಂಖ್ಯೆ ಸುಮಾರು ಎರಡು-ಎರಡೂವರೆ ಲಕ್ಷ ಆಗುತ್ತದೆಂದು ಅಂದಾಜು ಮಾಡಿಕೊಂಡು, ಯೋಜನೆ ತಯಾರಿಸಲಾಗುವುದು.

ಬೈಂದೂರು ಪುರಸಭೆ ವಲಯಕ್ಕೆ ಸುರಕ್ಷಿತ ನೀರು ಸರಬರಾಜು

೨೨೪. ಶ್ರೀ ಜಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭-೮೮ರಲ್ಲಿ ಬೈಂದೂರು ಪುರಸಭೆ ವಲಯಕ್ಕೆ ಸುರಕ್ಷಿತ ನೀರು ಸರಬರಾಜು ಯೋಜನೆಯನ್ನು ಮಂಜೂರು ಮಾಡಲಾಗುವುದೆಂದು ಸರ್ಕಾರದವರು ಪ್ರತಿ ವರ್ಷ ಆಶ್ವಾಸನೆ ನೀಡಿದ್ದರೂ ಸದರಿ ಯೋಜನೆಯು ಕಾರ್ಯಾರಂಭವಾಗದಿರುವುದಕ್ಕೆ ಕಾರಣವೇನು ?

ಆ) ಬಹಳ ಅಗತ್ಯವಾದ ಈ ಯೋಜನೆ ಎಂದು ಕಾರ್ಯಾರಂಭವಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಈ ಯೋಜನೆಯನ್ನು ಕಾರ್ಯಕ್ರಮ ಆಧ್ಯತಾ ಪಟ್ಟಿಯಲ್ಲಿ ಸೇರಿಸಿ ಅವಶ್ಯವಿರುವ ಆರ್ಥಿಕಾನುಕೂಲತೆಯನ್ನು ಒದಗಿಸಿ ನಂತರದಲ್ಲಿ ಪ್ರಸ್ತಾವನೆಯನ್ನು ಆಡಳಿತ್ಮಾಕ ಅನುಮೋದನೆಯನ್ನು ನೀಡುವುದಕ್ಕೆ ಕಳುಹಿಸಿ ಕೊಡುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ತಿಳಿಸಲಾಗಿದೆ.

ಆ) ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ ನಂತರ ಕಾರ್ಯಾರಂಭ ಮಾಡಲಾಗುವುದು.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಬಹಳ ಸ್ಪಷ್ಟವಾಗಿ ಉತ್ತರ ಬಂದಿದ್ದರೂ ಕೂಡಾ, ಈ ವರ್ಷ ಒಂದು ರೀತಿ ಅನುಮಾನಕರವಾದ ರೀತಿಯಲ್ಲಿ ಉತ್ತರ ಬರುತ್ತಿರುವುದು ಏತಕ್ಕೆ ? ೧೯೮೫-೮೬ರಲ್ಲಿ ಇದೇ ಪ್ರಶ್ನೆಯನ್ನು ಕೇಳಿದಾಗ ೧೯೮೬-೮೭ರಲ್ಲಿ ಈ ಯೋಜನೆಯನ್ನು ಕಾರ್ಯಾರಂಭ ಮಾಡಲಾಗುವುದೆಂದೂ, ೧೯೮೬-೮೭ರಲ್ಲಿ ಪುನಃ ಕೇಳಿದಾಗ, ೧೯೮೭-೮೮ ರಲ್ಲಿ ಕಾರ್ಯಾರಂಭ ಮಾಡಲಾಗುವುದೆಂದೂ ಮಾನ್ಯ ನಗರಾಭಿವೃದ್ಧಿ ಸಚಿವರು ಹೇಳಿದ್ದರೂ ಕೂಡ, ಈಗ ೧೯೮೭-೮೮ನೇ ವರ್ಷ ಕೊನೆಗೊಳ್ಳುತ್ತಾ ಬಂದಿದ್ದರೂ ಕೂಡಾ, ಇದನ್ನು ಆದ್ಯತೆ ಪಟ್ಟಿಯನ್ನು ಸೇರಿಸುವುದು, ಆರ್ಥಿಕ ಅನುಕೂಲತೆಯನ್ನು ಒದಗಿಸುವುದು, ಆಡಳಿತಾತ್ಮಕ ಅನುಮೋದನೆಯನ್ನು ಕೊಡುವುದು, ಈ ವಂಟ್ಟದಲ್ಲೇ ಇದೆ ಎನ್ನುವುದನ್ನು ಕೇಳುವುದಕ್ಕೆ ಬೇಸರ ವಾಗುತ್ತದೆ. ಇದು ಯಾವಾಗ ಪ್ರಾರಂಭವಾಗುತ್ತದೆ ಯಾವಾಗ ಇದಕ್ಕೆ ಆಡಳಿತ್ಮಾತಕ ಮಂಜೂರಾತಿ ದೊರಕುತ್ತದೆ ಎನ್ನುವುದನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಬೈಂದೂರು ಪಟ್ಟಣಕ್ಕೆ ಹಿಂದೆ ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲು ೪೦ ಲಕ್ಷ ರೂಪಾಯಿಗಳ ಒಂದು ಯೋಚನೆ ತಯಾರು ಮಾಡ ಲಾಗಿತ್ತು. ಇದು ಕೊಳವೆ ಬಾವಿಗಳ ಮುಖಾಂತರ ನೀರನ್ನು ಸರಬರಾಜು ಮಾಡುವಂತಹ ಯೋಜನೆ ಆಗಿತ್ತು. ಇದಕ್ಕೆ ಶೇಕಡ ೧೦ ರಷ್ಟು ಹಣವನ್ನು ಅಲ್ಲಿಯ ಮುನಿಸಿಪಾಲಿಟಿಯವರು ಕಟ್ಟಬೇಕೆಂದು ಹೇಳಿದಾಗ ಅವರು ಶೇಕಡ ಹತ್ತರಷ್ಟು ಹಣ ಕಟ್ಟುವುದಕ್ಕೆ ಆಗಲಿಲ್ಲ ಎಂದು ಹೇಳಿ ಆ ಯೋಜನೆ ಕಾರ್ಯಗತವಾಗಲಿಲ್ಲ. ಇದು ೧೯೮೧ರಲ್ಲಿ ಆದುದು. ಮುಂದಕ್ಕೆ ಹೋಯಿತು. ತದನಂತರ ಅವರು ನಮಗೆ ಕೊಳವೆ ಬಾವಿಗಳ ಯೋಜನೆ ಬೇಕಾಗಿಲ್ಲ, ತೆರದ ಬಾವಿಗಳಿಂದಲೇ ನಮಗೆ ನೀರು ಒದಗಿಸಿ ಕೊಡಿ ಎಂದು ಹೇಳಿದರು. ಅದರ ಬಗ್ಗೆ ಒಂದು ಯೋಜನೆ ಮಾಡಿದ್ದೇವೆ. ಇದು ಸುಮಾರು ಇಪ್ಪತ್ತಿನ ಲೆಕ್ಕದಲ್ಲಿ ೪೦ ಲಕ್ಷ ರೂಪಾಯಿಗಳ ಅಂದಾಜು ಆಗುವಂತಹದ್ದು. ಆದರೆ ಇದರಲ್ಲಿ ಒಂದು ಅನುಕೂಲ ಏನಾಗಿದೆ ಎಂದರೆ, ಶೇಕಡ ಹತ್ತರಷ್ಟು ಹಣವನ್ನು ಇದುವರೆಗೆ ಮುನಿಸಿಪಾಲಿಟಿಯವರು ಏನು ಕೊಡಬೇಕಾಗಿತ್ತು. ಅವನ್ನು ಈಗ ಕೊಡಬೇಕಾಗಿಲ್ಲ. ಸರಕಾರ ಜನಸಂಖ್ಯೆಗೆ ಅನುಗುಣವಾಗಿ ೨೦ ಸಾವಿರ ಜನಸಂಖ್ಯೆಯ ಒಳಗಿರುವಂತಹ ಪಟ್ಟಣಗಳು ಇದಕ್ಕೆ ಶೇಕಡ ೧೦ ರಷ್ಟು ಹಣವನ್ನು ಕಟ್ಟಬೇಕಾಗಿಲ್ಲ ಎಂಬ ನೀತಿಯನ್ನು ಮಾಡಿದೆ. ಇದುವರೆಗೆ ಇದು ಜಾರಿಗೆ ಬರದೇ ಇರುವುದಕ್ಕೆ ಕಾರಣ ಮುನಿಸಿಪಾಲಿಟಿಯವರು ಶೇಕಡ ೧೦ ರಷ್ಟು ಹಣವನ್ನು ಕಟ್ಟದಿರುವುದೇ ಆಗಿದ್ದು, ಅದರಿಂದ ಇದನ್ನು ಮುಂದುವರಿಸಲಿಲ್ಲ. ಈಗ ಸರಕಾರದ ನೀತಿ ಬದಲಾವಣೆಯಾಗಿರುವುದರಿಂದ, ಈಗ ಅಂದಾಜು ಎಲ್ಲವನ್ನೂ ಸಿದ್ಧಮಾಡಿ ಆದನಂತರ ನಾವು ಕಾರ್ಯ ಕ್ರಮ ತೆಗೆದುಕೊಳ್ಳಬೇಕು. ಈ ಮಧ್ಯದಲ್ಲಿ ತಮ್ಮ ಗಮನಕ್ಕೆ ತರಬೇಕಾದುದು ಎಂದರೆ, ಇವೆಲ್ಲಾ ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್ ಆಗಿವೆ. ಇದಕ್ಕೆ ಅಗತ್ಯವಾದ ಹಣವೆಲ್ಲವನ್ನೂ ಸರಕಾರವೇ ಭರಿಸಬೇಕಾಗುತ್ತದೆ ೪೦ ಲಕ್ಷ ರೂಪಾಯಿಗಳನ್ನೂ ಸರಕಾರವೇ ಭರಿಸಬೇಕು, ಪುರಸಭೆಯವರ ಹತ್ತಿರ ನಾವು ಹೋಗುವ ಹಾಗೆಯೇ ಇಲ್ಲ, ಪುರಸಭೆಯವರ ಹತ್ತಿರ ಹಣವೂ ಇರುವುದಿಲ್ಲ, ಇವತ್ತು ನಾವು ಸುಮಾರು ೬ ಕೋಟಿ ರೂಪಾಯಿಗಳ ವೆಚ್ಚದಲ್ಲಿ ೬೫ ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್‌ಗಳನ್ನು ತೆಗೆದುಕೊಂಡಿದ್ದು, ಕಾನಾ ಹಂತದಲ್ಲಿ ಕೆಲಸ ನಡೆಯುತ್ತಿದೆ. ಹಣದ ಒಂದು ಮುಗ್ಗಟ್ಟು ತಮಗೆ ಗೊತ್ತೇ ಇದೆ. ಆ ಕಾರಣದಿಂದ ಇದುವರೆಗೆ ಇದನ್ನು ತೆಗೆದುಕೊಂಡಿಲ್ಲ, ಇದನ್ನು ಮುಂದಿನ ವರ್ಷ ನೋಡಿ ಪರಿಶೀಲನೆ ಮಾಡುತ್ತೇವೆ.